ಅಸಲು ದಾವಾ ಸಂಖ್ಯೆ- 314/2018
ಪಿಡಬ್ಲ್ಯೂ- 01
ದಿನಾಂಕಃ 02.03.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲು - ಶ್ರೀ ಎಸ್ ಎಸ್ ಪಿ ವಕೀಲರಿಂದ.</u>

ಏನು ಪರಿಹಾರ ಕೇಳಿ ದಾವೆ ಮಾಡಿದ್ದೀರಿ ಎಂದು ಕೇಳಿಶ ಪ್ರಶ್ನೆಗೆ ಸಾಕ್ಷಿ ತಮ್ಮ ಹೆಸರನ್ನು ಹಚ್ಚಿಕೊಂಡಿದ್ದಾರೆ ಅದರ ಸಂಬಂಧ ದಾವೆ ಮಾಡಿದ್ದೇನೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ನನ್ನ ಖಾಸಾ ಸಹೋದರ ಎಂದರೆ ಸರಿ. ನನ್ನ ತಂದೆ 1977 ನೇ ಸಾಲಿನಲ್ಲಿ ಮರಣ ಹೊಂದಿದ್ದಾರೆ. ನನ್ನ ತಂದೆಗೆ 5 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು. ನನ್ನ ತಂದೆ ಮರಣ ಹೊಂದಿದ ನಂತರ ನಾವು ಸಹೋದರರು ಪಾಲು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಇದ್ದಾಗ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. 1965 ನೇ ಸಾಲಿನಲ್ಲಿ ಪಾಲು ವಿಭಾಗ ಆಗಿದೆ. ಸದರಿ ಪಾಲು ವಿಭಾಗ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ ನನ್ನ ತಂದೆಗೆ ನಾನೇ ಹಿರಿಯ ಮಗ ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಹೆಸರನ್ನು ದಾಖಲಿಸಿಕೊಂಡಿರುವ ವಿಷಯ ನನಗೆ 2018 ರಲ್ಲಿ ತಿಳಿಯಿತು. 2018 ರಲ್ಲಿ ಗೊತ್ತಾಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮನೆತನದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಮಹಮ್ಮದಹನೀಫ ತಂದೆ ಪಾರುಖಮೀಯಾ ಗಡಿ ಎನ್ನುವವರು ಅಸಲು ದಾವೆ ನಂ.186/1991 ನೇದ್ದನ್ನು ನನ್ನ ಹಾಗೂ ನನ್ನ ಇತರೆ ಸಹೋದರರ ವಿರುದ್ಧ ದಾಖಲಿಸಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನನಗೆ ನ್ಯಾಯಾಲಯದಲ್ಲಿ ನೋಟಿಸು ಜಾರಿ ಆಗಿತ್ತು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು 3 ನೇ ಪ್ರತಿವಾದಿ ಇದ್ದೆನು ಎಂದರೆ ಸರಿಯಲ್ಲ. ಈ ದಾವೆಯ 1 ನೇ ಪ್ರತಿವಾದಿ ಸದರಿ ದಾವೆಯಲ್ಲಿ 4 ನೇ ಪ್ರತಿವಾದಿ ಇದ್ದನು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ಮತ್ತು ನನ್ನ ಸಹೋದರ ಎಸ್ ಎ ಕೆ ವಕೀಲರಿಂದ ಮುಖಾಂತರ ಹಾಜರಾಗಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಈ ದಾವೆಯಲ್ಲಿ ಏನು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದಾರೆ ಎಂದು ನಾನು ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿಲ್ಲ. ಅಸಲು ದಾವೆ ನಂ.186/1991 ರಲ್ಲಿ ಸರ್ವೆ ನಂ.339/2 ಎ, 3 ಎಕರೆ 30 ಗುಂಟೆ ಮತ್ತು 339/2 ಬಿ, 2 ಎಕರೆ 25 ಗುಂಟೆ ದಾವಾ ಆಸ್ತಿಗಳನ್ನಾಗಿ ತೋರಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.339/2 ಎ, 3 ಎಕರೆ 30 ಗುಂಟೆ 1 ನೇ ಪ್ರತಿವಾದಿ ಹೆಸರಿನಲ್ಲಿತ್ತು

ಎಂದರೆ ಸರಿಯಲ್ಲ. ಸರ್ವೆ ನಂ.339/2 ಬಿ, 2 ಎಕರೆ 25 ಗುಂಟೆ ನನ್ನ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.